COLLECTION OF LOCAL FUND CESS

107. Sri K. H. KURADAGI (Mundargi).—

Will the Minister for Revenue be pleased to state:—

(*a*) whether it has come to the notice of Government that local fund cess, etc., which was not collected due to famine in Dharwar District for the last 5-6 years is now being collected;

(*b*) the propriety involved in taking such an action for sudden collection of Local Fund Cess which was withheld for the last 5-6 years;

(*c*) whether Government is thinking to stop collection of such revenues?

Sri N. HUTCHAMASTHY GOWDA (Minister for Revenue).—

(*a*) Yes.

(*b*) There is no provision in the Mysore Land Revenue Act for deduction or remission of Cess revenues. Remission of Cesses on revenues was opposed to law. Therefore, Government have orderd for collection of cesses. As per the orders the local authorities are collecting the cess on revenue along with arrears since last year.

(*c*) The question of amending the law is under the consideration of the Government.

ಶ್ರೀ ಕೆ. ಎಚ್. ಕುರಡಗಿ.—ಲೋಕಲ್ ಫಂಡ್ ಸೆಸ್ ವಗೈರೆಗಳನ್ನು ತಡೆಹಿಡಿಯುವುದಕ್ಕೆ ಕೂಡಲೆ ಸರ್ಕಾರದವರು ಲಿಖಿತ ಅಧಿಕಾರಿಗಳಿಗೆ ಆದೇಶವನ್ನು ನೀಡುತ್ತೀರಾ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೆಸ್ಸಿಗೆ ವಿನಾಯಿತಿ ಕೊಡುವುದಕ್ಕೆ ಆಕ್ಟಿನಲ್ಲಿ ಅವಕಾಶವಿಲ್ಲ. ಅದಕ್ಕಾಗಿ ಸಾಧ್ಯವಾದಮಟ್ಟಿಗೂ ಇದೇ ಅಧಿವೇಶನದಲ್ಲಿ ಲ್ಯಾಂಡ್‌ರೆವಿನ್ಯೂ ಆಕ್ಟಿಗೆ ತಿದ್ದುಪಡಿಯನ್ನು ತರುವುದಕ್ಕೆ ನಾನು ಸಾಧ್ಯವಾದಷ್ಟೂ ಪ್ರಯತ್ನ ಮಾಡುವುದಕ್ಕೆ ನೋಡುತ್ತೇನೆ.

ಶ್ರೀ ಕೆ. ಎಚ್. ಕುರಡಗಿ.—ಅಲ್ಲಿ ಏಕಕಾಲಕ್ಕೇ 4—5 ವರ್ಷಗಳ ಸೆಸ್ಸನ್ನು ವಸೂಲ್ಮಾಡುವುದಕ್ಕೆ ಹೊರಟರೆ ಜನರಿಗೆ ಬಹಳ ತ್ರಾಸ ಆಗುತ್ತದೆ. ಅದನ್ನು ತಡೆಹಿಡಿಯುವುದಕ್ಕಾಗುವುದಿಲ್ಲವೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜನರಿಗೆ ತೊಂದರೆಯಾಗದಹಾಗೆ ವಸೂಲ್ಮಾಡುವುದಕ್ಕೆ ತಿಳಿಸಿದೆ. ಶಕ್ತಿ ಇರತಕ್ಕವರಿಂದ ಮಾತ್ರ ವಸೂಲ್ಮಾಡಿ ಎಂದು ತಿಳಿಸಲಾಗಿದೆ.

ಶ್ರೀ ಎಂ. ಜಿ. ಬಣಕಾರ್.—ಮಾನ್ಯ ಸಚಿವರು ಇದರ ಬಗ್ಗೆ ಸೂಕ್ತ ಅಮೆಂಡ್‌ಮೆಂಟ್ ತರಲು ಇದೇ ಅಧಿವೇಶನದಲ್ಲಿ ಕಾಶ ಮಾಡುತ್ತಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾಡೋಣ.

ಶ್ರೀ ಎಂ. ಜಿ. ಬಣಕಾರ್.—ಸೆಸ್‌ಗಳನ್ನು ಸಸ್‌ಪೆಂಡ್ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾನೂನಲ್ಲಿ ಅಂಥ ಅವಕಾಶವಿಲ್ಲ.

ಶ್ರೀ ಕೆ. ಎಚ್. ಕುರಡಗಿ.—ಮುಂಡರ್ಗಿ ತಾಲ್ಲೂಕಿನಲ್ಲಿ ಇದರ ವಸೂಲು ಬಹಳ ಜೋರಿನಿಂದ ಸಾಗುತ್ತಿದೆ. ಜನರಿಗೆ ಬಹಳ ತೊಂದರೆಯಾಗಿದೆ. ಅದನ್ನು ತಪ್ಪಿಸುವುದಕ್ಕೇನು ಮಾಡುತ್ತೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೂಕ್ತವಾದ ತಿದ್ದುಪಡಿಯನ್ನು ಲ್ಯಾಂಡ್‌ರೆವಿನ್ಯೂ ಆಕ್ಟಿಗೆ ಇದೇ ಅಧಿವೇಶನದಲ್ಲಿ ತರತಕ್ಕದ್ದು ಒಂದೇ ಅದಕ್ಕೆ ಇರತಕ್ಕ ಸೂಕ್ತ ಮಾರ್ಗ.

ಅಧ್ಯಕ್ಷರು.—ಪ್ರಶ್ನೆ ನಂ. 158 ಶ್ರೀ ಎಚ್. ಎಸ್. ಸಿದ್ದಪ್ಪನವರು ಕೇಳಬಹುದು.